ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ

ದಿನಾಂಕಃ **14.08.2026**

ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಜೆ ವಿ ಕೆ
ವಕೀಲರಿಂದ

**ಪ್ರತಿವಾದಿಯು ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.**

1) ಆರ್ ಎ 36/2005 ರ ಆದೇಶ ಮತ್ತು ಡಿಕ್ರಿಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ 13 ಮತ್ತು 14 ಎಂದು ಗುರುತಿಸಲಾಯಿತು.

2) ಡಿಜಿಟಲ್ ಪ್ರತಿಯ ಪಿ ಟಿ ಶೀಟ್ ನ್ನು ಹಾಜರುಪಡಿಸಿದ್ದು ಅದನ್ನು ನಿಡಿ 15 ಎಂದು ಗುರುತಿಸಲಾಯಿತು.

**ಪಾಟಿ ಸವಾಲು ಃ ವಾದಿ ಪರ ಶ್ರೀ ಎಂ ಇ ಎಂ ವಕೀಲರಿಂದ**

1. ದಾರಿಯ ಹಕ್ಕನ್ನು ಪ್ರತಿಪಾದಿಸಲು ನಿಡಿ13 ಮತ್ತು 14 ರಂತೆ ಮತಾಯಿಯವರು ನನ್ನ ಮಾವ ಹಾಗೂ ವಾದಿಯವರು ತಂದೆಯ ಮೇಲೆ ಹಾಕಿರುವಂತಹ ಮೇಲ್ಮನವಿ ಎಂದರೆ ಸರಿ . ಸದರಿ ಮೇಲ್ಮನವಿಯನ್ನು ಸಲ್ಲಿಸಬೇಕಾದರೆ ಕೆಳಗಿನ ನ್ಯಾಯಾಲಯದಲ್ಲಿ ಸದರಿ ದಾವೆ ವಜಾ ಆಗಿದ ಕಾರಣ ಅದನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ . ನಿಡಿ 13 ರ ಅದು ಸರ್ವೆ ನಂ 106/1 ಪ್ರಸ್ತುತ ಸರ್ವೆ ನಂ 106/7 ಅಂತ ಆಗಿದ್ದು ಅದಕ್ಕೆ ಸಂಬಂಧಿಸಿದಂತ ದಾವೆ ಎಂದರೆ ಸಾಕ್ಷಿಯು ನಮ್ಮ ಜಾಗದಲ್ಲಿ ಅವರು ದಾರಿ ಮಾಡಿದ್ದರಿಂದ ದಾವೆ ಹೂಡಿರುತ್ತಾರೆ ಎಂದು ನುಡಿದರು.

2. ನಮ್ಮ ಜಾಗದಲ್ಲಿ ಅವರು ದಾರಿ ಮಾಡಿದದರು ಎಂದು ಪ್ರಥಮ ಬಾರಿ ನ್ಯಾಯಾಲಯದಲ್ಲಿ ತಿಳಿಸುತ್ತಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 13 ಮತ್ತು 14 ಕ್ಕೂ ಮತ್ತು ಸದರಿ ಪ್ರಸ್ತುತ ದಾವೆಗೂ ಯಾವುದೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ 15 ವಾದಿಯ ಜಾಗಕ್ಕೆ ಸಂಬಂದಪಟ್ಟಿದ್ದು ಎಂದರೆ ಸಾಕ್ಷಿಯು ನಮ್ಮ ಜಾಗವೂ ಸೇರಿರುತ್ತದೆ ಎಂದು ನುಡಿದರು. ನಿಡಿ 13 ಮತ್ತು 14 ರಲ್ಲಿ ಉಲ್ಲೇಖ ಮಾಡಿರುವ ಸರ್ವೆ ನಂ 106/1 ಮತ್ತು ಸರ್ವೆ ನಂ 106/7 ನಿಡಿ 15 ರ ಪೂರ್ಣ ಚೆಕ್ಕುಬಂದಿಯಲ್ಲಿ ಕಂಡು ಬರುತ್ತಿಲ್ಲ ಎಂದರೆ ಸರಿ . ಅದೆ ರೀತಿ ನಿಡಿ 15 ರಲ್ಲಿ ಸರ್ವೆ ನಂ 105/19ರ ಒಂದು ಎಕರೆ ವಿಸ್ತೀರ್ಣ ಸಂಪೂರ್ಣ ಚಿತ್ರಣವನ್ನು ತೋರಿಸಿರುತ್ತಾರೆ ಎಂದರೆ ಸರಿ . ನಿಡಿ 13 ರಲ್ಲಿ ದಾರಿಗೆ ಉಲ್ಲೇಖ ಮಾಡಿರುವಂತೆನಿಡಿ 15 ರಲ್ಲಿ ಯಾವುದೆ ನಕಾಶೆಯನ್ನು ತೋರಿಸಿರುವುದಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಮೊದಲು ದಾರಿ ಇರಲಿಲ್ಲ ಎಂದು ನುಡಿದರು .ನಿಡಿ 13 ಮತ್ತು 14 ರ ದಾಖಲಾತಿಯನ್ನು ನ್ಯಾಯಾಲಯದ ದಾರಿ ತಪ್ಪಿಸಲು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಸಿವಿಲ್ ನ್ಯಾಯಾಧೀಶರು,
ಕುಶಾಲನಗರ.